**ಸಾಕ್ಷಿಗೆ ದಿನಾಂಕಃ 17.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಬಿ.ಎಂ.ಎಸ್. ವಕೀಲರಿಂದಃ**

ಈ ಅರ್ಜಿಯಲ್ಲಿ ನನ್ನ ಗಂಡ ಮತ್ತು ಮಗ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯು ನನ್ನ ಗಂಡನ ಅಣ್ಣನ ಅಳಿಯ ಎಂದರೆ ಸರಿ. ಅವರು ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಈ ಅರ್ಜಿಯಲ್ಲಿ ಪ್ರತಿವಾದಿಯ ವಿಳಾಸ ಸಂಶೆಟ್ಟಿಪುರ, ಕಿರುಗಾವಲು ಹೋಬಳಿ, ಮಳವಳ್ಳಿ ತಾಲ್ಲೂಕಿಗೆ ನೋಟಿಸನ್ನು ನೀಡಿರುತ್ತೇವೆ ಎಂದರೆ ಸರಿ. ಉದ್ದೇಶಪೂರ್ವಕವಾಗಿ ಪ್ರತಿವಾದಿಯ ವಿಳಾಸಕ್ಕೆ ನೋಟಿಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಮಗಳ ಮದುವೆಗೆ ಹಣವನ್ನು ನೀಡಿದ್ದು, ಈ ಸಂಬಂಧ ನಾವು ಕರಾರು ಪತ್ರವನ್ನು ಬರೆದುಕೊಟ್ಟಿದ್ದೆವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಣವನ್ನು ಪಾವತಿ ಮಾಡಿರುತ್ತೇವೆ ಎಂದು ನುಡಿದಿರುತತಾರೆ. ಈ ಸಂಬಂಧ ದಾಖಲೆಗಳು ಇರುವುದಿಲ್ಲ. ಪ್ರತಿವಾದಿಯು ಅಸಲು ದಾವಾ ಸಂ.260/2015 ನ್ನು ನನ್ನ ಹಾಗೂ ನನ್ನ ಗಂಡ ಮತ್ತು ಮಕ್ಕಳ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ಗಂಡ ವಕೀಲರನ್ನು ನೇಮಿಸಿಕೊಂಡಿದ್ದರು ಎಂದರೆ ಸರಿಯಲ್ಲ.

ಡಿಕ್ರಿಯಾದ ಮೇಲೆ ನಾವುಗಳು ಮಿಸ್ ಸಂ.14/2021 ನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾವುಗಳು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿ. ದಿ.11.01.2024 ರಂದು ನನ್ನ ಗಂಡ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಿ.12.12.2023, 11.01.2024, 31.10.2023 ರಂದು ನನ್ನ ಗಂಡ ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ದಿ.11.01.2024 ರ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಮಗನನ್ನು ಉದ್ದೇಶಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ನ್ಯಾಯಾಲಯದ ಆಯುಕ್ತರ ಮೂಲಕ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಬರೆಸಿಕೊಂಡಿದ್ದು, ಸ್ವಾಧೀನವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಅರ್ಜಿ ಸಂ.14/2021 ಮತ್ತು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**